## 2

ಇನ್ನು ಕಾವ್ಯದ ಬಗ್ಗೆ ಹೇಳುವುದಾದರೆ ಸಂಗ್ರಹಿತವಾಗಿರುವ ಭಾಗಗಳೆಲ್ಲವೂ ಶುದ್ಧ ಕಾವ್ಯವಾಗಿದ್ದು ಬಿ.ಎಂ.ಶ್ರೀ. ಮತ್ತು ಕುವೆಂಪು ಅವರ ಮಾರ್ಗದರ್ಶಿ ಸೂತ್ರಗಳನ್ನು ಅನುಸರಿಸಲಾಗಿದೆ. ಕುಮಾರವ್ಯಾಸನು ತನ್ನ ಕಾವ್ಯವನ್ನು ಕುರಿತು ಬರೆದಿರುವ ಪದ್ಯದಲ್ಲಿ "ಅರಸುಗಳಿಗಿದುವೀರ" ಎಂಬ ಮಾತು ಬರುತ್ತದೆ. ಪದ್ಯದಲ್ಲಿ ಈ ಮಾತೇ ಮೊದಲನೆಯದು. ಕುಮಾರವ್ಯಾಸನ ಈ ಭಾರತ ವೀರವನ್ನೇ ಪ್ರಧಾನವಾಗಿಸಿಕೊಂಡಿದೆ. ಕೊನೆಯ ಐದು ಪರ್ವಗಳು ಯುದ್ಧಕ್ಕೇ ಮೀಸಲಾಗಿವೆ. ಪ್ರಾರಂಭದ ಐದು ಪರ್ವಗಳಲ್ಲಿ ಆ ಯುದ್ಧಕ್ಕೆ ಕಾರಣ ಮತ್ತು ಸಿದ್ಧತೆಗಳಾಗಿವೆ. ಇವುಗಳ ನಡುವೆ ಮಾನವೀಯ ಮೌಲ್ಯಗಳು, ದೇವ ಮಾನವನ ಸಂಘರ್ಷ, ರಾಜಕೀಯ ತಂತ್ರ–ಪ್ರತಿತಂತ್ರ, ಅಧಿಕಾರ ಲಾಲಸೆ, ಮೋಸ, ಕುಯುಕ್ತಿ, ದೈವದ ಆಟ, ವಿಧಿವಿಲಾಸ ಇತ್ಯಾದಿಗಳು ಬರುತ್ತವೆ. ಯುದ್ಧದ ಬೀಜ ಆದಿ ಪರ್ವದಲ್ಲಿಯೇ ಇದೆ. ಧೃತರಾಷ್ಟ್ರ ಹಿರಿಯನಾದರೂ ಕುರುಡನಾಗಿದ್ದರಿಂದ ರಾಜ್ಯ ದೊರೆಯದೆ ಕಿರಿಯನಾದ ಪಾಂಡುವಿಗೆ ದೊರೆಯುತ್ತದೆ. ಒಂದೇ ಮನೆಯಲ್ಲಿದ್ದ ಅವರ ಮಕ್ಕಳು ನಾನಾ ಕಾರಣಗಳಿಗಾಗಿ ಪ್ರತಿಸ್ಪರ್ಧಿಗಳಾಗಿ ಬೆಳೆಯುತ್ತಾರೆ. ಬಾಲ್ಯದಲ್ಲಿಯೇ ಜಗಳ, ಪಾಂಡವರನ್ನು ಕೊಲ್ಲಲು ಪ್ರಯತ್ನ, ಇಂದ್ರಪ್ರಸ್ಥಕ್ಕೆ ಪಾಂಡವರ ವರ್ಗಾವಣೆ. ಆದರೂ ಹಗೆತನ ಮುಂದುವರೆಯುತ್ತದೆ. ಪಾಂಡವರು ನಾರದನ ಮಾತಿನಂತೆ ಯಜ್ಞ ಮಾಡಿದಾಗ ದುರ್ಯೋಧನ ಆ ವೈಭವ ನೋಡಿ ಅವನ ಹೊಟ್ಟೆಯಲ್ಲಿ ಬೆಂಕಿ ಭುಗಿಲೇಳುತ್ತದೆ. ನಂತರ ಜೂಜು, ವನವಾಸ, ಅಜ್ಞಾತವಾಸ. ಇಲ್ಲೆಲ್ಲಾ ಪಾಂಡವರು ಯುದ್ಧಕ್ಕೆ ಬೇಕಾದ ಸಿದ್ಧತೆ ಮಾಡಿಕೊಳ್ಳುತ್ತಾರೆ. ಅಸೂಯೆ, ದ್ವೇಷ, ಮತ್ಸರ, ಅಹಂಕಾರ, ಅಧಿಕಾರ ದಾಹದಿಂದ ಯುದ್ಧವೆಂಬ ಸಾವು ನೋವಿನ ಕಡೆ ಕತೆ ಸಾಗುತ್ತದೆ. ಆದ್ದರಿಂದ ಇದನ್ನು ಯುದ್ಧದ ಕತೆಯೆಂದೂ ಕರೆಯಬಹುದು. ಮನುಷ್ಯನ ಸಂಘರ್ಷ ಮತ್ತು ಅದರ ಭಯಂಕರ ಸ್ವರೂಪ ಇಲ್ಲಿದೆ. ಆದ್ದರಿಂದಲೇ ಹನೂರರು ಆದಿಪಂಚಕವನ್ನು ಗ್ರಾಮೀಣರು ಮತ್ತು ಗ್ರಾಮ ಮೂಲದ ಗಮಕಿಗಳು ಇಷ್ಟಪಟ್ಟಷ್ಟು ಯುದ್ಧವೇ ಪ್ರಧಾನವಾದ ಉತ್ತರಪಂಚಕವನ್ನು ಓದಿದ್ದು ಕಡಿಮೆ ಎಂದು ಸರಿಯಾಗಿಯೇ ಹೇಳಿದ್ದಾರೆ.

ಈ ಕಾವ್ಯದಲ್ಲಿ ಕಂಡು ಬರುವ ಮಾನವೀಯ ಸಂಬಂಧಗಳ ವಿವರಗಳು ದೇಶಕಾಲಾತೀತ. ಮಾನವನ ಆಸಕ್ತಿಗಳು, ಧರ್ಮನಿರಪೇಕ್ಷ ವಿಚಾರಗಳು ಇವೆಲ್ಲವನ್ನು ಬಿಡದೆ ಸಂಗ್ರಹಿಸಿರುವ ಈ ಕೃತಿ ಓದುಗನನ್ನು ಆಕರ್ಷಿಸುವ ಗುಣ ಹೊಂದಿದೆ. ಮನುಷ್ಯ ಸಂಬಂಧಗಳ ಸ್ವರೂಪದ ಶೋಧನೆ ಕುಮಾರವ್ಯಾಸ ಭಾರತದ ಪ್ರಮುಖ ತಾತ್ತ್ವಿಕತೆಗಳಲ್ಲೊಂದು. ಅಭಿಮನ್ಯು ಶೌರ್ಯದಿಂದ ಯುದ್ಧ ಮಾಡಿ ಕೌರವ ಪಾಳಯದ ಅತಿರಥಮಹಾರಥರನ್ನು ಹಿಮ್ಮೆಟ್ಟಿಸುತ್ತಿದ್ದಾಗ ದುರ್ಯೋಧನ, "ಇಲ್ಲಿಯವರೆಗೆ ಏನು ದ್ವೇಷ ನನ್ನಲ್ಲಿತ್ತೋ ಅದೆಲ್ಲ ಮರೆತುಬಿಟ್ಟೆ; ನಿನ್ನಂತಹವನು ಎರಡೂ ವಂಶಗಳಿಗೆ ಕೀರ್ತಿಯನ್ನು ತರುವಂತಹವನು, ಅಸೂಯೆ, ಮತ್ಸರವೇಕೆ? ನಿನ್ನಂತಹ ಮಗನನ್ನು ಪಡೆದ ಅರ್ಜುನ ಧನ್ಯನಾದ" ಎಂದುಕೊಳ್ಳುತ್ತಾನೆ. ಹಾಗೆಯೇ ದ್ರೋಣ ಹಿಂದಿನಿಂದ ಬಾಣ ಬಿಟ್ಟು ಅಭಿಮನ್ಯುವನ್ನು ಸಾಯಿಸು ಎಂದು ಕರ್ಣನಿಗೆ ಹೇಳಿದಾಗ "ಅವನು ನನ್ನ ಮಗನೇ ಏನೋ" ಎಂಬ ಪ್ರೀತಿ ಮಮಕಾರ ಅವನಲ್ಲಿ ಮೂಡಿಬಿಡುತ್ತದೆ. ಯುದ್ಧರಂಗದಲ್ಲಿ ನಿರಾಯುಧನಾದ ಕರ್ಣನನ್ನು ಹೊಡೆದು ಸಾಯಿಸುವಂತೆ ಕೃಷ್ಣ ಅರ್ಜುನನಿಗೆ ಹೇಳಿದಾಗ, "ಅವನು ವೈರಿಯಾಗಿರಲಾರ, ಅದಾವ ಜನ್ಮದ ಸಖನೋ" ಎಂದು ಹೇಳುತ್ತಾನೆ. ಇಲ್ಲೆಲ್ಲ ಮಾನವೀಯ ಸಂಬಂಧದ ಶೋಧನೆಯ ಸ್ವರೂಪಗಳಿವೆ. ಮಾನವೀಯ ಮೌಲ್ಯಗಳ ಶೋಧನೆ ಮತ್ತು ಮಾನವೀಯ ಸಂಘರ್ಷಗಳ ಮೂಲಕ ಸಾರ್ವಕಾಲೀಕವಾದ ಮನುಷ್ಯ ಸಂಬಂಧಗಳ ಸ್ವರೂಪವನ್ನು ತನ್ನ ಧ್ವನಿ ಶಕ್ತಿಯಿಂದ ಅನಾವರಣಗೊಳಿಸುವ ಈ ಕಾವ್ಯ ಶಕ್ತಿಯುತವಾದದ್ದು. ಆದರೆ, ಅಲ್ಲಲ್ಲಿ ವರ್ಣಾಶ್ರಮ ಮತ್ತು